**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ** 10022/22

ಪಿಡಬ್ಲೂ-11

ಸಿಡಬ್ಲೂ- 11

| | | |
|---|---|---|
| ಸಾಕ್ಷಿ ಹೆಸರು | - | ಡಾಕಪ್ಪ |
| ತಂದೆ ಹೆಸರು | - | ರಾಮಪ್ಪ |
| ವಯಸ್ಸು | - | 47 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸಃ | - | ಸೀಗೇಹಳ್ಳಿ, ಸೊರಬ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 01-03-2025**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನನಗೆ ಮೃತ ಹೊಸಬಾಳೆ ಮೋಹನಪ್ಪ ಮತ್ತು ಆರೋಪಿಯ ಪರಿಚಯ ಇದೆ. ಫ್ರಾಸಾ -2 ಮತ್ತು ಫ್ರಾಸಾ 9 ರವರ ಪರಿಚಯ ಇದೆ. ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆ ಮಾಡಿದ ಬಗ್ಗೆ ಗೊತ್ತು.

ಪಂಚನಾಮೆ ಮಾಡುವ ಮೊದಲು ಪಂಚನಾಗಿ ಬರಬೇಕು ಎಂದು ಪೋಲೀಸರು ಒಂದು ನೋಟೀಸ್ ನ್ನು ಕೊಟ್ಟಿದ್ದರು. ಸಾಕ್ಷಿಯು ಸದರಿ ನೋಟೀಸ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ10 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ10(ಬಿ) ಎಂದು ಗುರುತಿಸಲಾಯಿತು.

ಈಗ್ಗೆ 3 ವರ್ಷದ ಹಿಂದೆ ಜೂನ್ 27 ನೇ ತಾರೀಖಿನಂದು ಲೋಕೇಶಪ್ಪ ಎಂಬುವವರ ನಿರ್ಮಾಣ ಹಂತದ ಮನೆಯ ಎದುರು ಕಚ್ಚಾ ರಸ್ತೆಯಲ್ಲಿ ಮಹಜರ್ ಮಾಡುತ್ತಿದ್ದರು. ಆರೋಪಿಯು ಮೃತ ಮೋಹನಪ್ಪನಿಗೆ ಗುದ್ದಲಿಯಿಂದ ಹಲ್ಲೆ ಮಾಡಿದ ಸ್ಥಳ ಇದೇ ಎಂದು ಕೃಷ್ಣಪ್ಪ ತೋರಿಸಿದ್ದು ಸದರಿ ಸ್ಥಳದಲ್ಲಿ ರಕ್ತ ಬಿದ್ದಿತ್ತು. ರಕ್ತ ಬಿದ್ದಿದ್ದ ಸ್ಥಳದಿಂದ ಪೋಲೀಸರು ರಕ್ತ ಮಿಶ್ರಿತ ಮಣ್ಣನ್ನು ಒಂದು ಡಬ್ಬಿಯಲ್ಲಿ ಮತ್ತು ಸಾದಾ ಮಣ್ಣನ್ನು ಒಂದು ಡಬ್ಬಿಯಲ್ಲಿ ಸಂಗ್ರಹಿಸಿದರು. ಆರೋಪಿಯು ಇದೇ ಗುದ್ದಲಿಯಿಂದ ಮೃತನಿಗೆ ಹೊಡೆದಿದ್ದು ಎಂದು ಪ್ರಾಸಾ2 ರವರು ತೋರಿಸಿದರು. ಪೋಲೀಸರು ಅದನ್ನು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಅವುಗಳ ಮೇಲೆ ನಮ್ಮ ಸಹಿ ಇರುವ ಚೀಟಿಗಳನ್ನು ಅಂಟಿಸಿದರು. ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ಮಹಜರ್ ಮಾಡಿರುತ್ತಾರೆ. ನಾನು ಸದರಿ ಮಹಜರ್ ಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು.

ಮಹಜರ್ ಸಮಯದಲ್ಲಿ ಕೃತ್ಯ ನಡದ ಸ್ಥಳದ ಕಚ್ಚಾ ನಕಾಶೆ ತಯಾರಿಸಿರುತ್ತಾರೆ. ಸಾಕ್ಷಿಯು ಸ್ಕೆಚ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಕೆಚ್ ನ್ನು ಈಗಾಗಲೇ ನಿಪಿ6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ6(ಸಿ) ಎಂದು ಗುರುತಿಸಲಾಯಿತು. ನಿಪಿ2 ರ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತಾರೆ.ಸದರಿ ಫೋಟೋಗಳನ್ನು ಈಗಾಗಲೇ ನಿಪಿ3 ಮತ್ತು ನಿಪಿ4 ಎಂದು ಗುರುತಿಸಲಾಗಿದೆ. ನಿಪಿ3 ಮತ್ತು ನಿಪಿ 4 ರಲ್ಲಿ ನಾನು ಕಂಡುಬರುತ್ತೇನೆ ಮತ್ತು ಪ್ರಾಸಾ2 ಮತ್ತು ಪ್ರಾಸಾ9 ರವರು ಕಂಡುಬರುತ್ತಾರೆ.

ಸಾದಾ ಮಣ್ಣು ಮತ್ತು ರಕ್ತಮಿಶ್ರಿತ ಮಣ್ಣನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ವಸ್ತುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾ 1 ಮತ್ತು

ಮು ಮಾ 3 ಎಂದು ಗುರುತಿಸಲಾಗಿದೆ. ಗುದ್ದಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 2 ಎಂದು ಗುರುತಿಸಲಾಗಿದೆ. ಮು ಮಾ 1 ರಿಂದ ಮು ಮಾ 3 ರ ಮೇಲೆ ಅಂಟಿಸಿರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತದೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಪ್ರಕರಣವನ್ನು ಪಾಟೀಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).